ಶ್ರೀ ವೈ.ಎಸ್.ವಿ. ದತ್ತ: ಜೆಡಿ(ಎಸ್)ನವರು ಇದ್ದರೆ ಅವರೂ ಬರುತ್ತಾರೆ.

(ಗೊಂದಲ)

ಅಧ್ಯಕ್ಷರು: ಆಯಿತು. ಸಾಕು.

ಶ್ರೀ ಜಗದೀಶ್ ಶೆಟ್ಟರ್: ಮಹದೇವ ಪ್ರಸಾದ್‌ರವರೆ, 20% ಕಡಿತ ಮಾಡುತ್ತಿದ್ದಾರೆ, ಇದನ್ನು ತಮಗೆ ಕಳುಹಿಸಿಕೊಡುತ್ತೇನೆ, ಇದರ ಮೇಲೆ ತಾವು action ತೆಗೆದುಕೊಳ್ಳಿ.

ಅಧ್ಯಕ್ಷರು: ಆಯಿತು. ಕಳುಹಿಸಿಕೊಡಿ.

2. ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಕ್ರಮ ಗಣಿಗಾರಿಕೆ

16 (229) ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ):– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕು ಬೇಂಗ್ರೆ ಪಂಚಾಯತ್ ವ್ಯಾಪ್ತಿಯಲ್ಲಿ ಎಷ್ಟು ಶಿಲೆ ಕಲ್ಲು ಗಣಿಗಾರಿಕೆ ನಡೆಯುತ್ತಿದೆ;

ಆ) ಈ ಪೈಕಿ ಎಷ್ಟು ಗಣಿಗಾರಿಕೆಗಳಿಗೆ ಪರವಾನಗಿ ನೀಡಲಾಗಿದೆ;

ಇ) ಇಲ್ಲಿಯವರೆಗೆ ಗಣಿಗಾರಿಕೆಯಿಂದ ಸರ್ಕಾರಕ್ಕೆ ಎಷ್ಟು ರಾಜಸ್ವ ಜಮಾ ಆಗಿರುತ್ತದೆ;

ಈ) ಅನಧೀಕೃತ ಗಣಿಗಾರಿಕೆ ತಡೆಯಲು ಸರ್ಕಾರ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲದಿರಲು ಕಾರಣವೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):–

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 14.00 ಎಕರೆ ಪ್ರದೇಶದಲ್ಲಿ 07 ಕಲ್ಲು ಗಣಿ ಗುತ್ತಿಗೆಗಳು ಚಾಲ್ತಿರುತ್ತವೆ.

ಸದರಿ ಜಿಲ್ಲೆಯ ಭಟ್ಕಳ ತಾಲ್ಲೂಕು ಬೇಂಗ್ರೆ ಪಂಚಾಯತ್ ವ್ಯಾಪ್ತಿಯಲ್ಲಿ ಅಲಂಕರಿಕ ಶಿಲೆ ಕಲ್ಲು ಗಣಿಗಾರಿಕೆ ಕೋರಿ ಯಾವುದೇ ಅರ್ಜಿಗಳು ಬಂದಿರುವುದಿಲ್ಲ. ಆದರೆ ಸದರಿ ಪಂಚಾಯತ್ ವ್ಯಾಪ್ತಿಯಲ್ಲಿ 2 ಕಟ್ಟಡ ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ವಿವರ ಈ ಕೆಳಕಂಡಂತೆ ಇರುತ್ತದೆ.

(1) ಶ್ರೀ ಗಜಾನನ ಕೊಪ್ಪ ದೇವಾಡಿಗ, ಸಾ: ಮಾವಿನಕಟ್ಟೆ, ಬೇಂಗ್ರೆ ಭಟ್ಕಳ ತಾಲ್ಲೂಕು ಇವರಿಗೆ ಬೇಂಗ್ರೆ ಗ್ರಾಮದ ಸ.ನಂ. 1094 ರಲ್ಲಿ 0–20 ಎಕರೆ ವಿಸ್ತೀರ್ಣದಲ್ಲಿ ದಿನಾಂಕ: 05–06–2006 ರಿಂದ ಜಾರಿಗೆ ಬರುವಂತೆ 5 ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿದ್ದು, ಸದರಿ ಗುತ್ತಿಗೆ ಅವಧಿ ಮುಗಿದ ನಂತರ ಗುತ್ತಿಗೆದಾರರು ನವೀಕರಣ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ.

(2) ಮೆ: ಮುರ್ಡೇಶ್ವರಾ ಇಂಡಸ್ಟ್ರೀಸ್, ಪ್ರೊ : ಶ್ರೀಮತಿ ಸವಿತಾ ಈಶ್ವರ ನಾಯ್ಕ ಶಿರಾಲಿ, ಭಟ್ಕಳ ತಾಲ್ಲೂಕು ಇವರಿಗೆ ಭಟ್ಕಳ ತಾಲ್ಲೂಕಿನ ಬೇಂಗ್ರೆ–II ಗ್ರಾಮ ಸರ್ವೆ ನಂಬರ್ 1097/1ರ ಪಟ್ಟಾ ಜಮೀನಿನಲ್ಲಿ 0–20 ಎಕರೆ ಪ್ರದೇಶಕ್ಕೆ ಕಲ್ಲು ಗಣಿ ಗುತ್ತಿಗೆ ಸಂಖ್ಯೆ 534 ನ್ನು 5 ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿದ್ದು, ಸದರಿ ಕಲ್ಲು ಗಣಿ ಗುತ್ತಿಗೆ ಅವಧಿ ಮುಗಿದ ನಂತರ ಗುತ್ತಿಗೆದಾರರು ನವೀಕರಣ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ.

ಆ) ಪ್ರಸ್ತುತ ಬೇಂಗ್ರೆ ಪಂಚಾಯಿತಿ ವ್ಯಾಪ್ತಿಯಲ್ಲಿ ಕಲ್ಲು ಗಣಿ ಗುತ್ತಿಗೆಗಳು ಮಂಜೂರಾಗದಿರುವುದರಿಂದ ಪರವಾನಿಗೆಗಳನ್ನು ವಿತರಿಸಿರುವುದಿಲ್ಲ.

ಇ) ಶ್ರೀ ಗಜಾನನ ಕೊಪ್ಪ ದೇವಾಡಿಗ ರವರು ಕಲ್ಲುಗಣಿಗುತ್ತಿಗೆ ಸಂಖ್ಯೆ: 521 ರಿಂದ 2013–14ನೇ ಸಾಲಿನ ಅಂತ್ಯಕ್ಕೆ ಬಾಕಿ ರೂ. 25,585/–ಗಳನ್ನು ಪಾವತಿಸಬೇಕಾಗಿರುತ್ತದೆ.

ಶ್ರೀ ಮುರುಡೇಶ್ವರ ಇಂಡಸ್ಟ್ರೀಸ್ ಇವರ ಕಲ್ಲುಗಣಿಗುತ್ತಿಗೆ ಸಂಖ್ಯೆ: 534 ರಿಂದ 2007–08 ರಿಂದ 2012–2013ನೇ ಸಾಲಿನವರೆಗೆ ಒಟ್ಟು ರೂ. 55,822/– ರಾಜಸ್ವ ಸರ್ಕಾರಕ್ಕೆ ಜಮಾ ಆಗಿರುತ್ತದೆ.

ಈ) 2013–14ನೇ ಸಾಲಿನಲ್ಲಿ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ ಕಛೇರಿ ವ್ಯಾಪ್ತಿಯಲ್ಲಿ ಅನಧಿಕೃತ ಸಾಗಾಣಿಕೆಯಲ್ಲಿ ತೊಡಗಿದ್ದ ಒಟ್ಟು 196 ವಾಹನಗಳಿಗೆ ದಂಡ ವಿಧಿಸಿ ರೂ.18.71 ಲಕ್ಷಗಳನ್ನು ವಸೂಲು ಮಾಡಲಾಗಿರುತ್ತದೆ.

ಅನಧಿಕೃತ ಗಣಿಗಾರಿಕೆ/ದಾಸ್ತಾನಿಗೆ ಸಂಬಂಧಿಸಿದಂತೆ, 41 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ರೂ. 21.98 ಲಕ್ಷ ದಂಡ ವಸೂಲು ಮಾಡಲಾಗಿದೆ.

2013–14ನೇ ಸಾಲಿನಲ್ಲಿ ಬೇಂಗ್ರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕ್ರಷರ್ ಘಟಕಗಳಲ್ಲಿ 04 ಅನಧಿಕೃತ ಕಟ್ಟಡ ಕಲ್ಲು ದಾಸ್ತಾನು ಮಾಡಿರುವ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಸದರಿಯವರ ವಿರುದ್ಧ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರನ್ವಯ ಕ್ರಮ ಜರುಗಿಸಿ ರೂ. 2,10,000/– ದಂಡ ವಸೂಲಿ ಮಾಡಲಾಗಿದೆ.

ಶ್ರೀ ಮಂಕಾಳ ಸುಬ್ಬ ವೈದ್ಯ : ಭಟ್ಕಳ ತಾಲ್ಲೂಕಿನ ಬೇಂಗ್ರೆ ತಾಲ್ಲೂಕು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಯುತ್ತಿರುವುದರ ಬಗ್ಗೆ ಸರ್ಕಾರಕ್ಕೆ ನಾನು question ಅನ್ನು ಕೇಳಿದ್ದೆ, ಆದರೆ, ಅವರು ಅಲ್ಲಿ ಯಾವುದೂ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ಯಾರೂ renewal ಮಾಡಲಿಲ್ಲ ಎಂದು ಹೇಳಿದ್ದಾರೆ ಅಂದರೆ ಕೊಡಲಿಲ್ಲವೆಂದು ಅರ್ಥ, 10 crusher night and day ನಡೆಯುತ್ತಿದೆ. ಕೋಟ್ಯಂತರ ರೂಪಾಯಿ ವಿಚಾರ.

ಅಧ್ಯಕ್ಷರು: ನೇರವಾಗಿ ಪ್ರಶ್ನೆ ಕೇಳಿ. ನಿಮ್ಮ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಯಾವುದು ಸಾಕಾಗಲಿಲ್ಲ, ಏನು ಉತ್ತರ ಬೇಕು ಕೇಳಿ.

ಶ್ರೀ ಸಿದ್ದರಾಮಯ್ಯ (ಕುಳಿತುಕೊಂಡು): ಏನು clarification ಬೇಕು ಕೇಳಿ.

ಶ್ರೀ ಮಂಕಾಳ ಸುಬ್ಬ ವೈದ್ಯ: ಅವರು ಕೊಟ್ಟಿರುವ ಉತ್ತರದಲ್ಲಿ ಉತ್ತರ ಸರಿಯಾಗಿಲ್ಲ.

ಅಧ್ಯಕ್ಷರು: ಯಾವ ಉತ್ತರ ಸರಿ ಇಲ್ಲ ಎಂದು ಕೇಳಿ.

ಶ್ರೀ ಮಂಕಾಳ ಸುಬ್ಬ ವೈದ್ಯ: ಅಲ್ಲಿ ನಡೆಯುತ್ತಿಲ್ಲವೆಂದು ಕೊಟ್ಟಿದ್ದಾರೆ. ಅಲ್ಲಿ ನಡೆಯುತ್ತಿದೆ.

ಅಧ್ಯಕ್ಷರು: ಯಾವ ಉತ್ತರ ಸರಿ ಇಲ್ಲ ?

ಶ್ರೀ ಮಂಕಾಳ ಸುಬ್ಬ ವೈದ್ಯ: ಗಣಿಗಾರಿಕೆ.

ಶ್ರೀ ಸಿದ್ದರಾಮಯ್ಯ: ವೈದ್ಯರವರೆ, please ಕುಳಿತುಕೊಳ್ಳಿ, ಅವರೇನು ಕೇಳಿದ್ದಾರೆಂದರೆ, ಭಟ್ಕಳ ತಾಲ್ಲೂಕಿನಲ್ಲಿ ಬೇಂಗ್ರೆ ಎನ್ನುವ ಪಂಚಾಯಿತಿ ಇದೆ. ಆ ಪಂಚಾಯಿತಿಯಲ್ಲಿ ಎಷ್ಟು ಕಲ್ಲು ಗಣಿ ಗುತ್ತಿಗೆ ಕೊಟ್ಟಿದ್ದಾರೆಂದು ಕೇಳಿದ್ದಾರೆ. ಎರಡು

ಕಟ್ಟಡ ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಿತ್ತು. ಶ್ರೀ ಗಜಾನನ ಕೊಪ್ಪ ದೇವಾಡಿಗ ಇವರಿಗೆ ದಿ:5–6–2006ರಲ್ಲಿ ಕೊಟ್ಟಿತ್ತು. ಎರಡನೆಯದು, ಮೆ:ಮುರ್ಡೇಶ್ವರ ಇಂಡಸ್ಟ್ರೀಸ್ ಪ್ರೊ: ಶ್ರೀಮತಿ ಸವಿತಾ ಈಶ್ವರ ನಾಯ್ಕ ಇವರಿಗೆ ಇನ್ನೊಂದು 2008ರಲ್ಲಿ ಕೊಟ್ಟಿತ್ತು. ಶ್ರೀ ಗಜಾನನ ಕುಪ್ಪ ದೇವಾಡಿಗ ಇದು ಪ್ರಾರಂಭವಾಗಲೇ ಇಲ್ಲ. ಆದರೂ ಅವರಿಂದ dead rent ಎಂದು ವಸೂಲು ಮಾಡಬೇಕೆಂದು 25,585 ರೂ. ಬಾಕಿ ಕೊಡಬೇಕೆಂದು ವಸೂಲಿ ಕ್ರಮ ತೆಗೆದುಕೊಂಡಿದ್ದೇವೆ. ಮೆ: ಮುರ್ಡೇಶ್ವರ ಇಂಡಸ್ಟ್ರೀಸ್ ಇವರ ಕಲ್ಲು ಗಣಿ ಗುತ್ತಿಗೆ ಸಂಖ್ಯೆ 534, 2007–08 ರಿಂದ 2012–13 ಇವರು ಸರ್ಕಾರಕ್ಕೆ ರಾಜಸ್ವ 55, 822 ರೂ. ಗಳಿದೆ. ಇದೂ ಕೂಡ ನವೀಕರಣ ಆಗಬೇಕು. ಅವರು ನವೀಕರಣಕ್ಕೆ ಬಂದಿಲ್ಲ. ಎರಡೂ ನಿಂತು ಹೋಗಿವೆ. ಅವರು ನವೀಕರಣ ಮಾಡಿಸಿಕೊಳ್ಳಲಿಲ್ಲ. ಅವರಿಗೆ ಮಾಡಿಕೊಟ್ಟಿಲ್ಲ. ಪರಿಸ್ಥಿತಿ ಅಷ್ಟೇ ಇರುವುದು.

ಅಧ್ಯಕ್ಷರು: ಆಯಿತು.

ಶ್ರೀ ಮಂಕಾಳ ಸುಬ್ಬ ವೈದ್ಯ: ಗಣಿಗಾರಿಕೆ ಗುತ್ತಿಗೆ ಏನು ಕೊಟ್ಟಿದ್ದಾರೆ quarry ಯನ್ನು ಚಾಲೂ ಮಾಡುತ್ತಿಲ್ಲ. ಸರ್ಕಾರದ ಆಸ್ತಿ.

ಅಧ್ಯಕ್ಷರು: ಮಾಡದೇ ಇದ್ದರೆ ಅವರ ಹಣೆಬರಹ ಅಲ್ಲವೇ ?

ಶ್ರೀ ಸಿದ್ದರಾಮಯ್ಯ: ಬಂದ್ ಆಗಿದೆಯಲ್ಲ. ಇನ್ನೇನು ಮಾಡುವುದು ? ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು: ಪ್ರಶ್ನೆ ಕೇಳಿ.

ಶ್ರೀ ಸಿದ್ದರಾಮಯ್ಯ: ಇನ್ನೇನಾದರೂ ಇದ್ದರೆ ಕೇಳಿ.

ಅಧ್ಯಕ್ಷರು: ನಡೆಯುತ್ತಿದ್ದರೆ, ಅದೇನು action ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಏನು ತೆಗೆದುಕೊಳ್ಳಬೇಕೋ ತೆಗೆದುಕೊಳ್ಳೋಣ. ಏನು ಕ್ರಮ ಬೇಕೋ ತೆಗೆದುಕೊಳ್ಳೋಣ, ಇನ್ನೂ ಏನಾದರೂ ಇದ್ದರೆ ನೀವು ನನ್ನ ಜೊತೆ ಮಾತನಾಡಿ.

ಶ್ರೀ ಮಂಕಾಳ ಸುಬ್ಬ ವೈದ್ಯ: ಅಲ್ಲಿ ನಡೆಯುತ್ತಿಲ್ಲ ಬಂದ್ ಮಾಡಿದ್ದಾರೆ. ಎರಡಕ್ಕೆ permission ಕೊಟ್ಟಿದ್ದು, ಇನ್ನೊಂದು ಕೇಳಿದ್ದೇನೆ. ಅದಕ್ಕೆ ಸಂಬಂಧಪಟ್ಟ ಉಪ ಪ್ರಶ್ನೆ ಕೇಳಿದೇನೆ. ಇಲ್ಲಿಯವರೆಗೆ ಗಣಿಗಾರಿಕೆಯಿಂದ ಸರ್ಕಾರಕ್ಕೆ ಎಷ್ಟು ರಾಜಸ್ವ

ಜಮಾ ಆಗಿರುತ್ತದೆಂದು ಕೇಳಿದ್ದೇನೆ. ಅಲ್ಲಿ ಗಣಿಗಾರಿಕೆ ನಡೆಯುತ್ತಿಲ್ಲವೆಂದು ಸರ್ಕಾರದ, ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ. ಅಲ್ಲಿ ದಂಡ ಹಾಕಿದ ಬಗ್ಗೆ ಇನ್ನೊಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದಾರೆ. ಇಲ್ಲಿಯವರೆಗೆ ಬಂದಂತ ಹಣ 55 ಸಾವಿರ ಎಂದು ಉತ್ತರ ಕೊಟ್ಟಿದ್ದಾರೆ. ಅದರ ನಂತರ ಕೊಟ್ಟಿದ್ದಾರೆಯೇ ? ಅನಧಿಕೃತ ಗಣಿಗಾರಿಕೆ ನಡೆಯುತ್ತಿದ್ದೆಯೇ ಎಂದು ಕೇಳಿದ್ದೇನೆ. ಅವರು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಅದರಿಂದ ವಸೂಲಿಯಾದದ್ದು 196 ವಾಹನಗಳಿಗೆ ದಂಡ ಹಾಕಿದ್ದಾರೆಂದರೆ ಅದು ನಡೆಯುತ್ತಿದೆ ಎಂದರ್ಥ. ಅಲ್ಲಿ ನಡೆಯುತ್ತಿದ್ದರೂ ಇದುವರೆವಿಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ನಡೆಯುತ್ತಿರುವುದು prove ಆಗಿದೆ. ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಆ ರೀತಿ ಹೇಳಿ. ಅಕ್ರಮವಾಗಿ ನಡೆಯುತ್ತಿದೆ ಎಂದು ನೀವು ಹೇಳುತ್ತಿದ್ದೀರಾ ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ ಇವರ ಇನ್ನೊಂದು ಪ್ರಶ್ನೆ ಏನೆಂದರೆ, ಅನಧಿಕೃತ ಗಣಿಗಾರಿಕೆ ತಡೆಯಲು ಸರ್ಕಾರ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲದಿರಲು ಕಾರಣವೇನು ? ಎಂದು ಕೇಳಿದ್ದಾರೆ. ಸರ್ಕಾರ ಏನು ಮಾಡಿದೆ? ಈ permit ಇಲ್ಲದೆ transport ಮಾಡುವವರ ಮೇಲೆ ದಂಡ ವಸೂಲು ಮಾಡಲಾಗಿದೆ.

ಅಧ್ಯಕ್ಷರು: ಅದು ಎಲ್ಲಾ ಇದೆ ಬಿಡಿ, ಪೊಲೀಸ್‌ನವರಿಗೆ ಇದೆಲ್ಲಾ ಹಬ್ಬ.

ಶ್ರೀ ಸಿದ್ದರಾಮಯ್ಯ: ಅವರ ಹತ್ತಿರ ದಂಡ ವಸೂಲು ಮಾಡಿದ್ದಾರೆ, ನಡೆಸದೇ ದಂಡ ಹೇಗೆ ವಸೂಲು ಮಾಡಿದ್ದಾರೆ ಎನ್ನುವುದು ಅವರ ಪ್ರಶ್ನೆ ಅಲ್ಲವೇ ?

ಶ್ರೀ ಮಂಕಾಳ ಸುಬ್ಬ ವೈದ್ಯ: ಹೌದು.

ಶ್ರೀ ಸಿದ್ದರಾಮಯ್ಯ: Illegal ಆಗಿ transport ಮಾಡುವವರ ಮೇಲೆ, license ಇಲ್ಲದೆ illegal ಆಗಿ ಮಾಡಿದ್ದರೆ ಅವರಿಂದ ದಂಡ ವಸೂಲು ಮಾಡಲಾಗಿದೆ. ಈಗ ಯಾವುದೂ illegal ಆಗಿ ನಡೆಯುತ್ತಿಲ್ಲ.

ಅಧ್ಯಕ್ಷರು: ನಿಖರವಾಗಿ ಏನು ಮಾಡಬೇಕೆಂದು ಕೇಳಿ.

ಶ್ರೀ ಸಿದ್ದರಾಮಯ್ಯ: ಈಗ ಅವರು ಏನು ಮಾಡಿದ್ದಾರೆಂದರೆ, ಇವರು ಒಂದು ಪಂಚಾಯಿತಿಗೆ ಪ್ರಶ್ನೆ ಕೇಳಿ ಇಡೀ ರಾಜ್ಯಕ್ಕೆ ಕೇಳುತ್ತಿದ್ದಾರೆ. ಅದರಿಂದ ನಿಮ್ಮ ಪಂಚಾಯಿತಿಯಲ್ಲಿ ಯಾವುದೇ illegal ಇಲ್ಲ.

ಶ್ರೀ ಮಂಕಾಳ ಸುಬ್ಬ ವೈದ್ಯ: ಇದೆ.

ಶ್ರೀ ಸಿದ್ದರಾಮಯ್ಯ: ಇಲ್ಲ, ಇದ್ದರೆ ನನಗೆ ಮಾಹಿತಿ ಕೊಡಿ ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಂಕಾಳ ಸುಬ್ಬ ವೈದ್ಯ: ನಡೆಯುತ್ತಿದೆ, 10 ಕ್ರಷರ್ ನಡೆಯುತ್ತಿದೆ.

ಅಧ್ಯಕ್ಷರು: ಯಾವುದು ಇದೆ ಅದರ ಮಾಹಿತಿ ಕೊಡಿ.

ಶ್ರೀ ಸಿದ್ದರಾಮಯ್ಯ: ನಿಮ್ಮಲ್ಲಿರುವ ಮಾಹಿತಿ ಕೊಡಿ ನಾವು ಅವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು: ಸಾಕು ಬಿಡಿ. Over ಶ್ರೀನಿವಾಸ್ ನೀವು ಕೇಳಿ.

ಶ್ರೀ ಪಿ.ರಾಜೀವ್: ಸನ್ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಪೂರಕವಾಗಿ ಹೇಳುತ್ತೇನೆ.

ಅಧ್ಯಕ್ಷರು: No ಪೂರಕ ಪ್ರಶ್ನೆ, ಈಗ time ಆಯಿತು.

ಶ್ರೀ ಪಿ.ರಾಜೀವ್: ಸನ್ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಪೂರಕವಾಗಿ ಹೇಳುತ್ತೇನೆ. ಅಧಿಕಾರಿಗಳು ಹೇಗೆ ಸರ್ಕಾರದ ದಿಕ್ಕನ್ನು ತಪ್ಪಿಸುತ್ತಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ.

ಅಧ್ಯಕ್ಷರು: ಆಯಿತು Demand ಮೇಲೆ ಬಂದಾಗ ಚರ್ಚೆ ಮಾಡಿ. ನೀವು ಹೇಳಿ.

ಜಿ.ಹೆಚ್. ಶ್ರೀನಿವಾಸ ಅವರು ಇಲ್ಲಿ ಇಲ್ಲ. ಹ್ಯಾರಿಸ್‌ರವರದ್ದು ಉತ್ತರ ಬಂದಿಲ್ಲ.

ಶ್ರೀ ಎನ್.ಎ. ಹ್ಯಾರಿಸ್ : ಈಗ ಉತ್ತರ ಬಂದಿದೆ.

ಅಧ್ಯಕ್ಷರು : ಉತ್ತರ ಈಗ ಬಂದಿದೆಯೇ ? ಸರಿ, ನೀವು ಈಗ ಕೇಳುತ್ತೀರಾ? ಮುಂದಕ್ಕೆ ಹಾಕೋಣವೇ ?

ಶ್ರೀ ಎನ್.ಎ. ಹ್ಯಾರಿಸ್ : ನಾನು ಓದಿ ಬಿಟ್ಟು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು : ಆಯಿತು, ಮುಂದಕ್ಕೆ ಹಾಕೋಣ. ಇದನ್ನು ನಾಳೆಗೆ ತೆಗೆದುಕೊಳ್ಳಿ. ಆಮೇಲೆ, ಡಾ: ಸುಧಾಕರ್ ಕೆ. ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಮುನಿರಾಜು ಎಸ್. ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ.

ಶ್ರೀ ಎಸ್. ಮುನಿರಾಜು : ಉತ್ತರ ಈಗ ಬಂತು, ಈಗ ಕೊಟ್ಟಿದ್ದಾರೆ.

ಅಧ್ಯಕ್ಷರು : ಬಂದಿದೆ ಏನ್ರೀ ? ನಮಗೆ ಉತ್ತರ ಬಂದಿಲ್ಲ.

ಶ್ರೀ ಎಸ್. ಮುನಿರಾಜು : ನಮ್ಮ ಕೈಯಲ್ಲಿ ಈಗ ಉತ್ತರ ತಂದು ಕೊಟ್ಟರು.

ಅಧ್ಯಕ್ಷರು : ನಮಗೆ ಇಲ್ಲಿ ಅನಧಿಕೃತವಾಗಿ ಉತ್ತರದ ಪ್ರತಿ ಬರಬೇಕೋ ಬೇಡವೋ?

ಶ್ರೀ ಎಸ್. ಮುನಿರಾಜು : ಅದನ್ನು ನೀವು ಕೇಳಬೇಕು ಅಧ್ಯಕ್ಷರೇ, ನಾವು ಏನು ಮಾಡುವುದು ?

ಅಧ್ಯಕ್ಷರು : ನಿಮ್ಮ ಕೈಯಲ್ಲಿ ಉತ್ತರ ಮುಟ್ಟಿಸಿದವರು ಯಾರು ಎಂದು ಅದನ್ನೇ ಕೇಳುತ್ತಿದ್ದೇನೆ ? Enquire into the matter. ನವುಗೆ ಕೊಡುವುದಕ್ಕಿಂತ ಮುಂಚೆ ಅಲ್ಲಿ ಹೇಗೆ ನೀವು ಕೊಡುತ್ತೀರಿ ? ಆಯಿತು ನೀವು ಕೇಳಿ.

ಶ್ರೀ ಎಸ್. ಮುನಿರಾಜು : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳನ್ನು 428 ನೇ ಪ್ರಶ್ನೆ ಕೇಳಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಎನ್.ಎ. ಹ್ಯಾರಿಸ್ ರವರು ಇಲ್ಲವೆ ?

ಅಧ್ಯಕ್ಷರು : ಹ್ಯಾರಿಸ್ ರವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ : ಕರೆಯಲೇ ಇಲ್ಲ.

ಶ್ರೀ ಎನ್.ಎ.ಹ್ಯಾರಿಸ್ : ನನ್ನ ಪ್ರಶ್ನೆಯೂ ಇದೆ. ಅದೂ ಈಗ ಬಂದಿದೆ ಸರ್.

ಅಧ್ಯಕ್ಷರು : ಮುನಿರಾಜು ನೀವು ಕೇಳಿ.

ಶ್ರೀ ಎಸ್. ಮುನಿರಾಜು : ಅಧ್ಯಕ್ಷರೇ, ನಾನು ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು : ಹ್ಯಾರಿಸ್ ರವರದ್ದು ನಾಳೆ ತೆಗೆದುಕೊಳ್ಳೋಣ.

ಶ್ರೀ ಎನ್.ಎ. ಹ್ಯಾರಿಸ್ : ನಾಳೆ ಬೇಡ ಸರ್, ಈಗ ಉತ್ತರ ಬಂದಿದೆ ಅವರದಾದ ಮೇಲೆ ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ನೀವು ಬೇಡ ಎಂದು ಹೇಳುತ್ತೀರಿ.

ಶ್ರೀ ಎನ್.ಎ.ಹ್ಯಾರಿಸ್ : ಈಗ ಉತ್ತರ ನನ್ನ ಕೈಗೆ ಕೊಟ್ಟಿದ್ದಾರೆ, ಓದಿ ಬಿಟ್ಟು ನಾನು ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಈಗ ಕೇಳುತ್ತೀರಾ ?

ಶ್ರೀ ಎನ್.ಎ. ಹ್ಯಾರಿಸ್ : ಈಗ ಅವರು ಉತ್ತರ ಕೊಟ್ಟಿದ್ದಾರೆ. ನನಗೆ ಸ್ವಲ್ಪ ಸಮಯ ಕೊಡಿ.

ಅಧ್ಯಕ್ಷರು : ನೀವು ಈಗ ಕೇಳುತ್ತೀರಾ?

ಶ್ರೀ ಎನ್.ಎ. ಹ್ಯಾರಿಸ್ : ಅವರದಾದ ಮೇಲೆ ನಾನು ಕೇಳುತ್ತೇನೆ. ಅವರದ್ದು ಮುಗಿಸಿ ಬಿಡಿ ಸರ್. Please Sir.

ಶ್ರೀ ಸಿದ್ದರಾಮಯ್ಯ : ಅವರು ಓದಿಕೊಳ್ಳಬೇಕಂತೆ, ಹೋಗಲಿ ಬಿಡಿ. ಮುನಿರಾಜುರವರದ್ದು ಕರೆದುಬಿಡಿ.

ಅಧ್ಯಕ್ಷರು : ಮುನಿರಾಜುರವರೇ, ನೀವು ಪ್ರಶ್ನೆ ಕೇಳಿ.

ರಾಜ ಕಾಲುವೆಗಳು

20 (428) ಮುನಿರಾಜು ಎಸ್. (ದಾಸರಹಳ್ಳಿ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್‌ವಾರು ಇರುವ ರಾಜಕಾಲುವೆಗಳು ಯಾವುವು ಮತ್ತು ಅವುಗಳ ಉದ್ದವೆಷ್ಟು;

(ಆ) ಈ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಅಭಿವೃದ್ಧಿಪಡಿಸಬೇಕಾದ ರಾಜಕಾಲುವೆಗಳು ಯಾವುವು; ಅವುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕಾಲ ನಿಗಧಿಗೊಳಿಸಲಾಗಿದೆಯೇ;

(ಈ) ದಾಸರಹಳ್ಳಿ ಕ್ಷೇತ್ರದಲ್ಲಿ ಎಷ್ಟು ರಾಜಕಾಲುವೆಗಳು ಒತ್ತುವರಿಯಾಗಿವೆ; ಹಾಗಿದ್ದಲ್ಲಿ, ಅವುಗಳು ಯಾವುವು; ಈ ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)